## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಸಚಿನ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ವಜ್ರಕುಮಾರ್ | **29.01.2024** |
| ವಯಸ್ಸು | : | 35 ವರ್ಷ | |
| ವೃತ್ತಿ | : | Asst. Professor, Dept general surgery,MMCRI Mysuru | ಪಿ.ಡಬ್ಲೂ: 9 |
| ವಾಸಸ್ಥಳ | : | Mysuru | ಸಿ.ಡಬ್ಲೂ: 11 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2017 ರಿಂದ ಇಲ್ಲಿಯವರೆಗೆ ನಾನು Dept general surgery,MMCRI Mysuru ರಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ.

2. ದಿಃ 15.06.2020 ರಂದು ನಾನು 24 ತಾಸಿನ ಓಪಿಡಿ ಕರ್ತವ್ಯದಲ್ಲಿದ್ದಾಗ ರಾತ್ರಿ 9.15 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣೆಯ ಪೊಲೀಸರಿಂದ ಗಾಯಾಳು ಮಹೇಂದ್ರರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆ ಎಂದು ಮಾಹಿತಿಯನ್ನು ಲಿಖಿತವಾಗಿ ಕೇಳಿದ್ದರು. ನಾನು ಆಗ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಮಹೇಂದ್ರರವರನ್ನು ಪರೀಕ್ಷೆ ಮಾಡಿ ಅವರು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆ ಎಂದು ಮಾಹಿತಿ ಒದಗಿಸಿದೆ. ಆ ಪ್ರಕಾರ ಆರಕ್ಷಕ ಮುಖ್ಯ ಪೇದೆ 120 ರವರು ಆ ದಿನ ರಾತ್ರಿ 9.20 ರಿಂದ 9.50 ಗಂಟೆಯವರೆಗೆ ನನ್ನ ಸಮಕ್ಷಮದಲ್ಲಿ ಗಾಯಾಳುವನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದರು.

3. ಈಗ ನಾನು ನೋಡುತ್ತಿರುವ ದಾಖಲೆ ಆ ದಿನ ನನ್ನ ಸಮಕ್ಷಮ ಪಡೆದುಕೊಂಡ

ಗಾಯಾಳುವಿನ ಹೇಳಿಕೆಯಾಗಿದ್ದು ಅದನ್ನು ಈಗಾಗಲೇ ನಿಪಿ. 1 ಎಂದು ಗುರುತಿಸಲಾಗಿದೆ. ನಿಪಿ. 1 ರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆ ಪೊಲೀಸರು ನಮಗೆ ಕೊಟ್ಟಂತಹ ರಿಕ್ವಿಜಿಸನ್ ಹಾಗೂ ನಾನು ಅದರ ಮೇಲೆ ಬರೆದ ಅಭಿಪ್ರಾಯ ಇದ್ದು ಅದನ್ನು ನಿಪಿ.–14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 14 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

29.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.